Grams : "UNIVAGRIS"
FAX : 0091-080-23636826

Phone No. : 2333 0984
2333 0153 Etxn. 205

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

**ಕುಲಸಚಿವರ ಕಛೇರಿ, ಜಿ.ಕೆ.ವಿ.ಕೆ., ಬೆಂಗಳೂರು – 560 065.**

**ಕ್ರ.ಸಂ: ಕು.ಸ./ಅ–2/ಡಿಪ್ಲೋಮಾ ಪ್ರವೇಶ/2010–11** **ದಿನಾಂಕ: 23–06–2011**

## ಅಧಿಸೂಚನೆ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇಲ್ಲಿ 2011–12ನೇ ಸಾಲಿಗೆ ಎರಡು ವರ್ಷಗಳ ಅವಧಿಯ ಡಿಪ್ಲೋಮ(ಕೃಷಿ) (4 ಸೆಮಿಸ್ಟರ್) ಕೋರ್ಸುಗಳಿಗೆ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಈ ಕೆಳಗೆ ನಮೂದಿಸಿದ ಆವರಣಗಳಲ್ಲಿ ಕೋರ್ಸ್‌ಗಳನ್ನು ಪ್ರಾರಂಭಿಸಲಾಗುತ್ತಿದೆ.

| ಕ್ರ.ಸಂ | ಆವರಣ | ಸೀಟುಗಳ ಸಂಖ್ಯೆ |
|---|---|---|
| 1. | ಕೃಷಿ ಸಂಶೋಧನಾ ಕೇಂದ್ರ, ಕತ್ತಲಗೆರೆ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ. | 50 |
| 2. | ಕೃಷಿ ಮಹಾವಿದ್ಯಾಲಯ, ವಿ.ಸಿ. ಫಾರಂ, ಮಂಡ್ಯ | 50 |

**ಬೋಧನಾ ಕ್ರಮ ಮತ್ತು ಮಾಧ್ಯಮ :** ಡಿಪ್ಲೋಮಾ(ಕೃಷಿ)ವನ್ನು ಕನ್ನಡ ಮಾಧ್ಯಮದಲ್ಲಿ ಸೆಮಿಸ್ಟರ್ ಪದ್ಧತಿಯಲ್ಲಿ ಬೋಧಿಸಲಾಗುವುದು.

**ಅವಧಿ :** ಎರಡು ವರ್ಷ ( ನಾಲ್ಕು ಸೆಮಿಸ್ಟರ್)

**ಪ್ರವೇಶ ಅರ್ಹತೆ :**

1. ವಿಶ್ವವಿದ್ಯಾನಿಲಯದಲ್ಲಿ ಕೃಷಿ ಡಿಪ್ಲೋಮಾ ಕೋರ್ಸ್‌ಗೆ ಪ್ರವೇಶ ಕೋರುವ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ. ಅಥವಾ ಸಮಾನಾಂತರ ಪರೀಕ್ಷೆಯಲ್ಲಿ ಕನ್ನಡ ಪಠ್ಯವನ್ನು ಭಾಷೆಯಾಗಿ ಅಭ್ಯಸಿಸಿ ಕನಿಷ್ಟ ಶೇ.45 ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು.
2. ದಿನಾಂಕ 30–04–2011ರಂದು ಅಭ್ಯರ್ಥಿಗಳ ವಯಸ್ಸು 19 ವರ್ಷಗಳನ್ನು ಮೀರಿರಬಾರದು.

- ಪ್ರವೇಶ ಬಯಸುವ ಅಭ್ಯರ್ಥಿಗಳು ಅರ್ಜಿ ಹಾಗೂ ವಿವರಣಾ ಪತ್ರಗಳನ್ನು ದಿನಾಂಕ: 27–06–2011ರಿಂದ ದಿನಾಂಕ: 11–07–2011ರವರೆಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಕುಲಸಚಿವರ ಕಛೇರಿ, ಕೃವಿವಿ, ಬೆಂಗಳೂರು ಅಥವಾ ಪ್ರಾಂಶುಪಾಲರು, ಕೃಷಿ ಸಂಶೋಧನಾ ಕೇಂದ್ರ, ಕತ್ತಲಗೆರೆ, ದಾವಣಗೆರೆ ಜಿಲ್ಲೆ ಅಥವಾ ಪ್ರಾಂಶುಪಾಲರು, ಕೃಷಿ ಮಹಾವಿದ್ಯಾಲಯ, ವಿಸಿ ಫಾರಂ, ಮಂಡ್ಯ ಇವರಲ್ಲಿ ಪಡೆಯಬಹುದು.

**ಅರ್ಜಿ ಹಾಗೂ ವಿವರಣಾ ಪತ್ರಗಳ ಶುಲ್ಕ:**

- ಸಾಮಾನ್ಯ ವರ್ಗದವರಿಗೆ ರೂ.300/–, ಎಸ್.ಸಿ/ಎಸ್.ಟಿ/ಪ್ರವರ್ಗ–1ದವರಿಗೆ ರೂ.150/–ಆಗಿದ್ದು, ಡಿಡಿಯನ್ನು ಹಣಕಾಸು ನಿಯಂತ್ರಣಾಧಿಕಾರಿಗಳು(ಕಂಟ್ರೋಲರ್), ಯು.ಎ.ಎಸ್., ಜಿಕೆವಿಕೆ ಇವರ ಹೆಸರಿನಲ್ಲಿ ಪಡೆದು ಅರ್ಜಿಯನ್ನು ಪಡೆಯಬಹುದು ಅಥವಾ ಆಯಾ ಕೇಂದ್ರಗಳಲ್ಲಿ ಇರುವ ಬ್ಯಾಂಕ್ ಮೂಲಕ ಹಣ ಪಾವತಿಸಿ ಖುದ್ದಾಗಿ ಅರ್ಜಿಗಳನ್ನು ಪಡೆಯಬಹುದು.
- ಅರ್ಜಿ ಹಾಗೂ ವಿವರಣಾ ಪತ್ರವನ್ನು ಕೃವಿವಿ ವೆಬ್‌ಸೈಟ್ "www.uasbangalore.edu.in"ನಲ್ಲಿ ದಿನಾಂಕ 27–06–2011ರಿಂದ 11–07–2011ರವರೆಗೆ ಡೌನ್‌ಲೋಡ್ ಮಾಡಬಹುದು. ಈ ರೀತಿ ವೆಬ್‌ಸೈಟ್ ಮುಖಾಂತರ ಪಡೆದು ಭರ್ತಿಮಾಡಿದ ಅರ್ಜಿಗಳೊಂದಿಗೆ ನಿಗದಿತ ಶುಲ್ಕವನ್ನು ಡಿಡಿ ರೂಪದಲ್ಲಿ ಲಗತ್ತಿಸಿ ಕಳುಹಿಸಿಕೊಡಬೇಕು.
- ಎಲ್ಲಾ ಅಗತ್ಯ ಅಡಕಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಕುಲಸಚಿವರು, ಕೃವಿವಿ, ಬೆಂಗಳೂರು ಅಥವಾ ಪ್ರಾಂಶುಪಾಲರು, ಕೃಷಿ ಸಂಶೋಧನಾ ಕೇಂದ್ರ, ಕತ್ತಲಗೆರೆ, ದಾವಣಗೆರೆ ಜಿಲ್ಲೆ ಹಾಗೂ ಪ್ರಾಂಶುಪಾಲರು, ಕೃಷಿ ಮಹಾವಿದ್ಯಾಲಯ, ವಿಸಿ ಫಾರಂ, ಮಂಡ್ಯ ಇಲ್ಲಿಗೆ ದಿನಾಂಕ 15–07–2011ರ ಒಳಗೆ ತಲುಪುವಂತೆ ಖುದ್ದಾಗಿ ಅಥವಾ ಅಂಚೆ ಮೂಲಕ ಕಳುಹಿಸಬಹುದು.

- ದಿನಾಂಕ: 27–06–2011ರಿಂದ ದಿನಾಂಕ: 11–07–2011ರ ಒಳಗೇ ಡಿಡಿಯನ್ನು ಪಡೆದಿರಬೇಕು, ನಂತರ ಡಿಡಿಯನ್ನು ಪಡೆದು ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**ಪ್ರವೇಶ ಮತ್ತು ಆಯ್ಕೆ ವಿಧಾನ :**

- ಅರ್ಹ ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯನ್ನು ಅಳವಡಿಸಿ, ಅಭ್ಯರ್ಥಿಯು ಇಚ್ಛಿಸಿರುವ ಸ್ಥಳದ ಆದ್ಯತೆಯ ಮೇರೆಗೆ ಪ್ರವೇಶಕ್ಕೆ ಆಯ್ಕೆ ಮಾಡಿ, ಆಯ್ಕೆಯಾದ ಅಭ್ಯರ್ಥಿಗಳಿಗೆ ಪತ್ರ ಹಾಗೂ ವೆಬ್ ಸೈಟ್ ಮುಖಾಂತರ ತಿಳಿಸಲಾಗುವುದು.

- ಅಭ್ಯರ್ಥಿಗಳು ತಾವು ಅಭ್ಯಾಸ ಮಾಡಲು ಇಚ್ಛಿಸುವ ಸ್ಥಳವನ್ನು ಅರ್ಜಿ ನಮೂನೆಯ ನಿಗದಿತ ಸ್ಥಳದಲ್ಲಿ ಮೊದಲನೇ ಆದ್ಯತೆ ಮತ್ತು ಎರಡನೇ ಆದ್ಯತೆ ಎಂದು ಕಡ್ಡಾಯವಾಗಿ ಭರ್ತಿ ಮಾಡಬೇಕು.

**ಶಿಷ್ಯವೇತನ :**

- ಕೃಷಿ ಡಿಪ್ಲೊಮಾ ಕೋರ್ಸ್‌ಗೆ ಆಯ್ಕೆಯಾದ ಎಲ್ಲಾ ಅಭ್ಯರ್ಥಿಗಳಿಗೆ ಕರ್ನಾಟಕ ಘನ ಸರ್ಕಾರದ ವತಿಯಿಂದ ಲಭ್ಯವಿರುವ ಪ್ರತಿ ತಿಂಗಳಿಗೆ ರೂ.1,೦೦೦/– ಶಿಷ್ಯವೇತನವನ್ನು ನೀಡಲಾಗುವುದು.

ಆದೇಶದ ಮೇರೆಗೆ

**(ಚಿಕ್ಕದೇವಯ್ಯ)**

**ಕುಲಸಚಿವರು**

**ಪ್ರತಿಗಳು :**

1. ವಿಶೇಷ ಅಧಿಕಾರಿಗಳು (ಕೃಷಿ ಡಿಪ್ಲೋಮಾ ಕೋರ್ಸ್), ಕೃವಿವಿ, ಜಿಕೆವಿಕೆ, ಬೆಂಗಳೂರು.
2. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಮಹಾವಿದ್ಯಾಲಯಗಳ ಎಲ್ಲಾ ಡೀನ್‌ಗಳಿಗೆ.
3. ಪ್ರಾಂಶುಪಾಲರು, ಕೃಷಿ ಸಂಶೋಧನಾ ಕೇಂದ್ರ, ಕತ್ತಲಗೆರೆ, ದಾವಣಗೆರೆ ಜಿಲ್ಲೆ.
4. ಪ್ರಾಂಶುಪಾಲರು, ಕೃಷಿ ಮಹಾವಿದ್ಯಾಲಯ, ವಿಸಿ ಫಾರಂ, ಮಂಡ್ಯ.
5. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಅಧಿಕಾರಿಗಳು.
6. ಕುಲಪತಿಗಳ ಕಾರ್ಯದರ್ಶಿ, ಕೃವಿವಿ, ಜಿಕೆವಿಕೆ, ಬೆಂಗಳೂರು – ಮಾಹಿತಿಗಾಗಿ.
7. ಕುಲಸಚಿವರ ಆಪ್ತ ಕಾರ್ಯದರ್ಶಿ / ಸಹಾಯಕ ಕುಲಸಚಿವರು, ಕುಲಸಚಿವರ ಕಛೇರಿ, ಜಿಕೆವಿಕೆ, ಬೆಂಗಳೂರು.
8. ರಾಜ್ಯದ ಎಲ್ಲಾ ಕೃಷಿ /ತೋಟಗಾರಿಕೆ / ಪಶುವೈದ್ಯಕೀಯ ಹಾಗೂ ಮೀನುಗಾರಿಕೆ ವಿಶ್ವವಿದ್ಯಾನಿಲಯಗಳ ಕುಲಸಚಿವರುಗಳಿಗೆ.
9. ಕಡತಕ್ಕೆ.

**ಪ್ರತಿಯನ್ನು ಆದರಪೂರ್ವಕವಾಗಿ :**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಡಾ।। ಅಂಬೇಡ್ಕರ್ ವೀಧಿ, ನಾಲ್ಕನೇ ಅಂತಸ್ತು, ಬಹುಮಹಡಿಗಳ ಕಟ್ಟಡ, ಬೆಂಗಳೂರು–1. – ಆದ್ಯ ಮಾಹಿತಿಗಾಗಿ